ಕರ್ನಾಟಕ ವಿಧಾನಸಭೆಯಂ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಂದ ಅನುಸಾರವಾಗಿ ಭಾರತದ ಸಂವಿಧಾನದ ೨೫೪(೨)ನೇ ಅನುಚ್ಛೇದದ ಪೇರೆಗೆ ೧೯೮೦ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

)ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಅನುಮೋದಿಸಲಾಯಿತು)

1983ನೇ ಇಸವಿಯ ಕರ್ನಾಟಕ ರಾಜ್ಯ ಮೋಟಾರು ವಾಹನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಉಪಾಧ್ಯಕ್ಷರೆ, ನಾನು ೧೯೮೩ನೇ ಇಸವಿಯ ಕರ್ನಾಟಕ ರಾಜ್ಯ ಮೋಟಾರು ವಾಹನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್.—ಅಧ್ಯಕ್ಷರೆ, ಈಗ ಇರುವಂಥ ಕಾಯಿದೆಯಲ್ಲಿ, ಕೇಂದ್ರ ಸರ್ಕಾರ ಮತ್ತು ದೊಡ್ಡ ದೊಡ್ಡ ಖಾಸಗಿಯವರು ತಮ್ಮ ಬಸ್ಸುಗಳಲ್ಲಿ ತೆಗೆದುಕೊಂಡು ಹೋಗತಕ್ಕ ವರ್ಗೀಕರಣದಲ್ಲಿ ಹೆಚ್ಚಿನ ತೆರಿಗೆ ಕೊಡಬೇಕಾಗುತ್ತದೆ ಎನ್ನುವ ವಾದ ಇರುವುದರಿಂದ ಈ ಬಗ್ಗೆ ನಮ್ಮ ಶ್ರೇಷ್ಠ ನ್ಯಾಯಾಲಯದ ರಿಟ್ ನಂಬರ್ ೪೧೩, ೪೧೪ ಮತ್ತು ೪೧೭-೭೪ ದಿನಾಂಕ ೧೫-೬-೧೯೭೫ರ ತೀರ್ಪಿಗೆ ವರ್ಗೀಕರಣದ ಮೇಲೆ ತಿದ್ದುಪಡಿ ತಂದಿದ್ದೇವೆ. ಪ್ರೈವೇಟ್ ಸರ್ವೀಸ್ ವೆಹಿಕಲ್ಸ್‌ಗೆ ನೂರು ರೂಪಾಯಿಗಳು ಪರ್‌ಸೀಟ್ ಪರ್ ಕ್ವಾರ್ಟರ್‌ಗೆ ಎಂದು ಸೇರಿಸಿದ್ದೇವೆ. ಈ ವಾಕ್ಯವನ್ನು ಸೇರಿಸುವ ಮೂಲಕ ಸರಳವಾರತಕ್ಕ ತೆರಿಗೆಯನ್ನು ಆ ಬಸ್ಸುಗಳಿಗೆ ಹಾಕಲಿಕ್ಕೆ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಪ್ರೈವೇಟ್ ಸರ್ವೀಸ್ ವೆಹಿಕಲ್ಸ್‌ಗಳಿಂದ ಬರತಕ್ಕ ತೆರಿಗೆಯ ಬಗ್ಗೆ ತಿದ್ದುಪಡಿ ತಂದಿದ್ದೀರಿ. ನಮಗೆ ಬರುವ ಆದಾಯ ಉಳಿಸುವ ದೃಷ್ಟಿಯಿಂದ ಎಷ್ಟು ಚರ್ಚೆ ಮಾಡಿದರೂ ಅನೇಕ ಲೋಪದೋಷಗಳು ಆಗುತ್ತವೆ. ಕೆ.ಎಸ್.ಆರ್.ಟಿ.ಸಿ ಯಲ್ಲಿ ನಾಲ್ಕೈದು ಸಾವಿರ ಬಸ್ಸುಗಳಿವೆ. ಸರ್ಕಾರಕ್ಕೆ ಬರುವ ತೆರಿಗೆ ೨೨ ಕೋಟಿ ರೂಪಾಯಿ, ಖಾಸಗಿಯವರದು ಒಂದು ಲಕ್ಷ ಬಸ್ಸುಗಳಿವೆ. ಅವರ ಟ್ಯಾಕ್ಸ್ ೩೦ ಕೋಟಿ ರೂಪಾಯಿ. ಒಟ್ಟು ಲೆಕ್ಕ ಹಾಕಿದರೆ ೫೫ ಕೋಟಿ ರೂಪಾಯಿ ಆದಾಯ ಬರುತ್ತದೆ. ಇದು ಹೇಗೆ ಅನಾಮಲಿ ಆಗುತ್ತದೆ. ಸರಿಯಾದ ಲೆಕ್ಕ ಹಾಕಿದರೆ ಕೋಟ್ಯಾಂತರ ರೂಪಾಯಿ ಹಣ ಬರಬೇಕಾಗುತ್ತದೆ. ನೂರಾರು ಕೋಟಿ ರೂಪಾಯಿ ಬರತಕ್ಕದು ಎಲ್ಲಿ ಸೋರಿ ಹೋಗುತ್ತದೆ ಎನ್ನುವ ಬಗ್ಗೆ ಆಲೋಚನೆ ಮಾಡಬೇಕು. ತಮಗೆ ಇಷ್ಟೆಲ್ಲಾ ಹಣ ಬಂದರೂ ೪೦ ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದೀರಿ, ಇದಕ್ಕೆ ಕಾರಣ ಏನೆಂದರೆ ತಾವು ಎಲ್ಲಿ ಮನಾಪಲಿ ಮಾಡಿದ್ದೀರಿ ಅಂದರೆ ನಮಗೆ ಎಲ್ಲಿ ಆದಾಯ ಬರುವ ಜಾಗ ಇತ್ತು ಅಲ್ಲಿ ಮನಾಪಲಿ ಮಾಡಲಿಲ್ಲ. ಅದನ್ನು ಖಾಸಗಿಯವರಿಗೆ ಕೊಟ್ಟು ಬಿಟ್ಟಿದ್ದೀರಿ. ಎಲ್ಲಿ ನಷ್ಟ ಸಂಭವಿಸುತ್ತದೆ ಅಲ್ಲಿ ಸರ್ಕಾರದ ಬಸ್ಸುಗಳನ್ನು ಓಡಿಸುತ್ತಿದ್ದೀರಿ. ಅದರ ಬಗ್ಗೆ ಸರಿಯಾದಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಏನು ಅನ್ಯಾಯವಾಗುತ್ತಿದೆ, ಸರ್ಕಾರಕ್ಕೆ ಬರತಕ್ಕ ಹಣ ಎಲ್ಲಿ ಸೋರಿ ಹೋಗುತ್ತಿದೆ ಅದನ್ನು ತಡೆಗಟ್ಟುವುದಕ್ಕೆ ತಂದಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಇನ್ನು ಮುಂದಾದರೂ ೧೫೦ ಕೋಟಿ ರೂಪಾಯಿ ಆದಾಯ ಸೋರಿ ಹೋಗದಂತೆ ತಡೆಗಟ್ಟಲಿಕ್ಕೆ ತಿದ್ದುಪಡಿ ತರಬೇಕೆಂದು ಸೂಚಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ ಪಿ. ಪ್ರಕಾಶ್.—ಈಗಾಗಲೇ ಈ ತಿದ್ದುಪಡಿ ಬಗ್ಗೆ ಸ್ವಾಗತ ಮಾಡಿದ್ದೀರಿ. ಆದರೂ ಕೆಲವು ಮಾಹಿತಿಗಳನ್ನು ಕೊಡಬೇಕಾದ್ದು ನನ್ನ ಕರ್ತವ್ಯ. ಮೋಟಾರ್ ವೆಹಿಕಲ್ಸ್‌ನಿಂದ ೮೨ ಕೋಟಿ ರೂಪಾಯಿಗಳ ತೆರಿಗೆಯನ್ನು ನಿರೀಕ್ಷೆ ಮಾಡಿದ್ದೇವೆ. ಇದರಲ್ಲಿ ೬ ಸಾವಿರ ಬಸ್ಸುಗಳಿಂದ ೨೨ ಕೋಟಿ ರೂಪಾಯಿ ತೆರಿಗೆ ಮಾಡುವುದರ ಜೊತೆಗೆ ಬೇರೆ ಖಾಸಗಿ ಬಸ್ಸುಗಳು, ಕಾರುಗಳು, ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು ಇರುವುದರಿಂದ ಆ ವಿಚಾರಗಳ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡದೆ ಸೋರುವಿಕೆ ಬಗ್ಗೆ ಬೇರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ತಿದ್ದುಪಡಿ ತಂದಿರತಕ್ಕ ಮುಖ್ಯ ಉದ್ದೇಶ ಕಾರ್ಯಾನಿಗೆ ನೌಕರರನ್ನು ಕರೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಅವರು ಕೊಡತಕ್ಕ ಹೆಚ್ಚುವರಿ ತೆರಿಗೆ ಬಗ್ಗೆ ತಂದಿದ್ದೇವೆ. ಈಗ "Private service vehicle" means an

omnibus constructed or adapted to carry more than nine persons (excluding the driver) and used by or on behalf of the owner of such vehicle for the purpose of carrying persons for or in connection with his trade or business or otherwise than for hire or reward". ಈ ಶಬ್ದಗಳ ಬಗ್ಗೆ ಶ್ರೇಷ್ಠ ನ್ಯಾಯಾಲಯದವರು ಕೊಟ್ಟ ಆದೇಶದ ಮೇಲೆ ತಂದಿರುವುದು. ಈ ಸೋರುಮಿಕೆ ತಡೆಗಟ್ಟುವ ಬಗ್ಗೆ ಸುಧಾರಣೆ ಮಾಡುತ್ತೇವೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಇಷ್ಟು ಉಪಯೋಗ ತೆಗೆದುಕೊಂಡ ಮೇಲೆ, ಕಾರ್ಖಾನೆಯ ನೌಕರರು ಪ್ರತಿ ತಿಂಗಳು ತಮ್ಮ ಪಾಸ್‌ಗಾಗಿ ಇಷ್ಟು ಹಣ ಕೊಡಬೇಕೆಂದು ಏನು ನಿಗದಿ ಮಾಡಿದ್ದಾರೆ ಅದನ್ನು ಕಡಿಮೆ ಮಾಡಬೇಕು. ಹೆಚ್‌ಎಂಟಿ, ಹೆಚ್‌ಎಎಲ್ ಬಸ್ಸುಗಳು ಹೋಗುತ್ತವೆ ಅದರಲ್ಲಿ ಹೋಗಬಹುದಲ್ಲ ನೌಕರರಿಗೆ ಅನುಕೂಲ ಮಾಡಿಕೊಡುತ್ತೀರಾ ? ಅವರು ಪ್ರತಿ ತಿಂಗಳು ಇಷ್ಟು ಹಣ ಕೊಡಬೇಕೆಂದು ನಿಗದಿ ಮಾಡಿರುತ್ತಾರೆ. ಅದನ್ನು ಕಡಿಮೆ ಮಾಡಬೇಕು. ತಾವು ಕೊಟ್ಟಂಥ ಪ್ರಯೋಜನ ಕಾರ್ಖಾನೆ ನೌಕರರಿಗೂ ಹೋಗದೆ, ಸರ್ಕಾರಕ್ಕೂ ಬರದೇ ಹೋದರೆ ಪ್ರಯೋಜನ ಆಗುವುದಿಲ್ಲ ಆದುದರಿಂದ, ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್. - ಈಗ ಶ್ರೇಷ್ಠ ನ್ಯಾಯಾಲಯದವರು ಕೊಟ್ಟ ತೀರ್ಪಿನ ಪ್ರಕಾರ ತಿದ್ದುಪಡಿಯನ್ನು ತಂದಿದ್ದೇವೆ. ಈಗ ನೌಕರರುವಾರರು, ತಾವು ವಾಸಿಸುವ ಸ್ಥಳದಿಂದ ಕಾರ್ಖಾನೆಗಳಿಗೆ ಹೋಗಿ ಬರುವುದಕ್ಕೆ ಹಣ ಕೊಡಬೇಕಾದ್ದು ಏನಿದೆ, ಅದನ್ನು ಕಡಿಮೆ ಮಾಡಿಸಿಕೊಳ್ಳಬೇಕಾದರೆ, ಆ ನೌಕರುದಾರರೆ, ಹೋರಾಟದ ಬಗ್ಗೆ ತಮ್ಮ ಕೈಗೆತ್ತಿಕೊಳ್ಳಬೇಕು ಆ ತರಹ ಏನಾದರೂ ಬಂದಾಗ ಸರ್ಕಾರ ಅನುಕೂಲ ಮಾಡಿಕೊಡುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್. —ಕಾರ್ಮಿಕರು ಏತಕ್ಕೆ ಹೋರಾಟ ಮಾಡಬೇಕು. ತಾವೇ ಕರೆದು ತೀರ್ಮಾನ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ. —ಇದರಲ್ಲಿ ಮತ್ತೊಂದು ತೊಂದರೆ ಕೊಡಬಾರದು. ಕಂಟ್ರಾಕ್ಟ್ ಕ್ಯಾರಿಯೇಜ್ ಬಸ್ಸುಗಳು ಕೂಡ ಹೋಗುತ್ತಿದ್ದವು ; ಇದರ ಲಾಭವನ್ನು ಪಡೆದು ಬರೀ ಆಮ್ನಿ ಬಸ್ಸುಗಳು ಹೋಗುವ ಸಂದರ್ಭ ಬರಬಹುದು ; ಇದರ ಬಗ್ಗೆಯು ಕೂಡ ಜಾಗ್ರತೆ ವಹಿಸುವುದು ಒಳ್ಳೆಯದು. Perhaps you can think of it in the rules. Instead of 'on contract' bus there will be umpteen number of omi buses running on the road.

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ಶಬ್ದಗಳ ಉಪಯೋಗ ಕೂಡ ಸ್ಪಷ್ಟವಾಗಿದೆ. The clause reads as :

> "... ...On behalf of the owner of such vehicle for the purpose of carrying persons for or in connection with his trade or business or otherwise than for hire or reward." ಇದರಿಂದ ಅವಾಯಂ ಬರಲಾರದೆಂದು ಭಾವಿಸುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ರಂಗನಾಥ್‌ರವರು ಹೇಳಿದಹಾಗೆ ಇದರ ಉಪಯೋಗವನ್ನು ಪಡೆದರು ಅದರ ಫಲವನ್ನು ಕಾರ್ಮಿಕರಿಗೆ ಕೊಡಲೇಬೇಕು. ಇಲ್ಲದೇ ಹೋದರೆ, ಇದರಿಂದ ಸರ್ಕಾರಕ್ಕೂ ಸಪ್ಪವಾಗುತ್ತದೆ ; ಕಾರ್ಮಿಕರಿಗೂ ತೊಂದರೆಯಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಟ್ಯಾಕ್ಸಿ ಕಡಿಮೆ ಮಾಡಿದ ಪ್ರದೇಶಕ್ಕಾಗಿ ಬದಲಾವಣೆ ಮಾಡುವ ಬದಲು ಸುಪ್ರೀಂಕೋರ್ಟಿಗೆ ಅಪೀಲು ಹೋಗಬಹುದಾಗಿತ್ತು. ಹೋಗದೇ ಇರುವುದಕ್ಕೆ ಕಾರಣ ವಿತು ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಇದು ೧೫-೬-೭೫ರಲ್ಲಿ ಆಗಿರುವಂತಾದ್ದು ; ಆಗ ಇದ್ದಂಥ ಸರ್ಕಾರ ಅಪೀಲು ಹೋಗಬೇಕಾಗಿತ್ತು. ನಾವು ಬಂದಮೇಲೆ ಈ ವಿಚಾರವನ್ನು ಕೈಗೆತ್ತಿಕೊಂಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಫೈನಾನ್ಸಿಯಲ್ ಮೆಮೋರಂಡಮ್ ಇಲ್ಲ. ಕೊಕ್ಕಸಕ್ಕೆ ಬರಬೇಕಾದಂಥ ಹಣ ಎಷ್ಟು ಹೋಗುತ್ತೆ ಎನ್ನುವುದೇ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಆದಾಯ ಕಡಿಮೆಯಾಗುತ್ತದೆಯೋ ಹೊರತು ; ಖರ್ಚು ಏನಿಲ್ಲ.

ಉಪಾಧ್ಯಕ್ಷರು.—ಪ್ರಸ್ತಾವವು ಹೀಗಿದೆ. ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಪರ್ಯಾಲೋಚಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರ್ಯಾಲೋಚನೆ

ಖಂಡ 2 ರಿಂದ 4

ಉಪಾಧ್ಯಕ್ಷರು.—"ಪ್ರಸ್ತಾವನೆ ಹೀಗಿವೆ" ಖಂಡ ೨ ರಿಂದ ೪ (ಎರಡೂ ಸೇರಿದಂತೆ) ಈ ವಿಧೇಯಕದ ಭಾಗವಾಗಿರತ್ತದೆ.

ಪ್ರಸ್ತಾವನೆಯಂನ್ನು ಅಂಗೀಕರಿಸಲಾಯಿತು

(ಖಂಡ ೨ ರಿಂದ ೪ನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವನೆ ಹೀಗಿದೆ. "ಖಂಡ ೧, ದೀರ್ಘ ಶೀರ್ಷಿಕೆ ಮತ್ತು ಪೀಠಿಕಾ ಭಾಗವನ್ನು ಈ ವಿಧೇಯಕದಲ್ಲಿ ಸೇರಿಸಲಾಗಿದೆ"

ಪ್ರಸ್ತಾವನೆ ಅಂಗೀಕಾರವಾಯಿತು

(ಖಂಡ ೧, ದೀರ್ಘ ಶೀರ್ಷಿಕೆ ಮತ್ತು ಪೀಠಿಕಾ ಭಾಗವನ್ನು ಈ ವಿಧೇಯಕದಲ್ಲಿ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವನೆ

ಶ್ರೀ ಎಂ. ಪಿ. ಪ್ರಕಾಶ್.—ನಾನು, ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅಂಗೀಕರಿಸಬೇಕಾಗಿ ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವವು ಹೀಗಿದೆ. ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಂಕವನ್ನು ಅನುಮೋದಿಸಲಾಯಿತು

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಮಾನ್ಯ ಕಾನೂನು ಮಂತ್ರಿಗಳು ಇಲ್ಲಿಯೇ ಇದ್ದಾರೆ ; ನಮಗೆ ಪೂರಕವಾದ ತಿದ್ದುಪಡಿಗಳ ಪ್ರತಿಗಳು ರಾತ್ರಿ ಬಂದಿವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಿನ್ನೆ ಕಾರ್ಯಕಲಾಪಗಳ ಪಟ್ಟಿಯಲ್ಲಿಯೇ ಸೇರಿಸಲಾಗಿತ್ತು; ನಿನ್ನೆಯ ಕಳುಹಿಸಿಕೊಡಲಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಇನ್ನು ಮೇಲೆ ಕನ್ನಡದಲ್ಲಿಯೇ ವಿಧೇಯಕಗಳನ್ನು ಮಂಡಿಸಲಾಗುವುದೆಂದು ಹಿಂದೆ ಕೂಡ ಹೇಳಿದರು ; ಇದುವರೆಗೆ ಯಾವುದೂ ಆಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕನ್ನಡದಲ್ಲಿ ಈಗಾಗಲೇ ಕೆಲವು ಮಸೂದೆಗಳನ್ನು ತರುವ ದೃಷ್ಟಿಯಿಂದ ನೇರವಾಗಿ ಕನ್ನಡದಲ್ಲಿಯೇ ಪ್ರಾರೂಪಕ ಮಾಡತಕ್ಕ ವಿಭಾಗವನ್ನು ಮಾಡಿದ್ದೇವೆ. ಕಳೆದ ಪೂರ್ವತ್ತೈದು ವರ್ಷಗಳಿಂದಲೂ ಇರುವ ಕುಂಬಕರ್ಣನ ನಿದ್ದೆ ಮಾಡುತ್ತಿದ್ದರು ; ನಾವು ಒಂದು ವರ್ಷದಲ್ಲಿಯೇ ಮಾಡಿದ್ದೇವೆ.